## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : 2026-27ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಒಂದು ಜೊತೆ ಶೂ ಮತ್ತು 2 ಜೊತೆ ಸಾಕ್ಸ್‌ಗಳನ್ನು ವಿದ್ಯಾವಿಕಾಸ ಯೋಜನೆಯಡಿ ಅಂದಾಜು ರೂ.104.00 ಕೋಟಿಗಳ ವೆಚ್ಚದಲ್ಲಿ ವಿತರಿಸುವ ಬಗ್ಗೆ.

**ಓದಲಾಗಿದೆ** :
1. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರ ಕಛೇರಿಯ ಏಕಕಡತ ಸಂಖ್ಯೆ:DPI-CPI0DRAW(DRAW)/ 87/2025.
2. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆರವರ ಕಛೇರಿ ಏಕ ಕಡತ ಸಂಖ್ಯೆ: DPI-CPI0URDU(OTHE)/26/2026

********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಏಕಕಡತದಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಂದು ಜೊತೆ ಶೂ ಮತ್ತು 2 ಜೊತೆ ಸಾಕ್ಸ್ ಖರೀದಿಸಿ ವಿತರಿಸುವ ಬಗ್ಗೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರಿಂದ ಈ ಕೆಳಗಿನಂತೆ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.

2026-27ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ಖರೀದಿಸಿ ವಿತರಿಸಲಾಗುವುದು. 2025-26ನೇ ಸಾಲಿನವರೆಗೆ ನಿಗದಿಪಡಿಸಿದ ನಿರ್ದಿಷ್ಟತೆಗಳ ಶೂ-ಸಾಕ್ಸ್‌ಗಳನ್ನು ಖರೀದಿಸಿ ವಿತರಿಸಲು ಅನುದಾನವನ್ನು ಸಂಬಂಧಿಸಿದ ಶಾಲಾ ಎಸ್.ಡಿ.ಎಂ.ಸಿ ಖಾತೆಗಳಿಗೆ ತರಗತಿವಾರು ವಿದ್ಯಾರ್ಥಿಗಳ ಸಂಖ್ಯೆ ಮತ್ತು ಘಟಕ ವೆಚ್ಚಕ್ಕೆ ಅನುಸಾರವಾಗಿ ವರ್ಗಾಯಿಸಲಾಗುತ್ತಿತ್ತು.

2026-27ನೇ ಸಾಲಿಗೆ ಬೇಕಾದ ಅಂದಾಜು ಅನುದಾನದ ವಿವರ ಈ ಕೆಳಗಿನಂತಿದೆ:

| ಲೆಕ್ಕಶೀರ್ಷಿಕೆ | ಉಪ ಲೆಕ್ಕಶೀರ್ಷಿಕೆಗಳು | ಅಂದಾಜು ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 2202-01-109-0-03 | 221- Materials and Supplies<br>133- Aspirational Taluks<br>422- Schedule caste sub plan<br>423- tribal sub plan | 104.00<br>(ಒಂದು ನೂರ ನಾಲ್ಕು ಕೋಟಿ ರೂಪಾಯಿಗಳು ಮಾತ್ರ) |

ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು ತಿಳಿಸಿರುವಂತೆ 2025-26ನೇ ಸಾಲಿನಲ್ಲಿ ಸ್ಯಾಟ್ಸ್ ತಂತ್ರಾಂಶದಲ್ಲಿರುವಂತೆ ಸರ್ಕಾರಿ ಶಾಲೆಗಳ ದೃಢೀಕೃತ ವಿದ್ಯಾರ್ಥಿಗಳ ದಾಖಲಾತಿ ವಿವರ, ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳ ಘಟಕ ವೆಚ್ಚ ಮತ್ತು 2026-27ನೇ ಸಾಲಿಗೆ ಶೂ-ಸಾಕ್ಸ್ ಖರೀದಿಸಿ ವಿತರಿಸಲು ಅಗತ್ಯವಾಗಿರುವ ಅನುದಾನದ ವಿವರ ಈ ಕೆಳಗಿನಂತಿದೆ:

| ತರಗತಿ | SATS ನಲ್ಲಿರುವಂತೆ ಮಕ್ಕಳ ಸಂಖ್ಯೆ | ಘಟಕ ವೆಚ್ಚ (ರೂ.ಗಳಲ್ಲಿ) | ಒಟ್ಟು ಅನುದಾನ (ರೂ.ಗಳಲ್ಲಿ) |
|---|---|---|---|
| 1 ರಿಂದ 5 | 1988296 | 265/- | 52,68,98,440/- |
| 6 ರಿಂದ 8 | 1109618 | 295/- | 32,73,37,310/- |
| 9 ರಿಂದ 10 | 558699 | 325/- | 18,15,77,175/- |
| **ಒಟ್ಟು** | **3656613** | | **1,03,58,12,925/-** |
| **ಒಟ್ಟು ಅನುದಾನ** | | | **ರೂ.104.00 ಕೋಟಿಗಳು** |

2025-26ನೇ ಸಾಲಿನವರೆಗೂ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು ಖರೀದಿಸಿ ವಿತರಿಸಲು ಶಾಲಾ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ಜಂಟಿ ಖಾತೆಗೆ ಬಿ.ಎಂ.ಎಸ್. ಮೂಲಕ ಅನುದಾನ ಬಿಡುಗಡೆ ಮಾಡಲಾಗುತ್ತಿತ್ತು. ಶಾಲಾ ಎಸ್.ಡಿ.ಎಂ.ಸಿ ಮತ್ತು ಮುಖ್ಯ ಶಿಕ್ಷಕರನ್ನೊಳಗೊಂಡ ಖರೀದಿ ಸಮಿತಿಯು ಈ ಕೆಳಗಿನಂತಿರುತ್ತದೆ.

| | | |
|---|---|---|
| 1 | ಎಸ್.ಡಿ.ಎಂ.ಸಿ. ಅಧ್ಯಕ್ಷರು | ಸಮಿತಿಯ ಅಧ್ಯಕ್ಷರು |
| 2 | ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರು | ಸದಸ್ಯ ಕಾರ್ಯದರ್ಶಿ |
| 3 | ಎಸ್‌ಡಿಎಂಸಿ ನಾಮ ನಿರ್ದೇಶಿತ ಮೂವರು ಸದಸ್ಯರು (ಇಬ್ಬರು ಮಹಿಳಾ ಸದಸ್ಯರು ಕಡ್ಡಾಯವಾಗಿ ಇರುವುದು) | ಸದಸ್ಯರು |

ಸದರಿ ಪ್ರಕ್ರಿಯೆಯ ನಿರ್ವಹಣೆಯಲ್ಲಿ ಈ ಕೆಳಕಂಡ ಕೆಲವು ತೊಡಕುಗಳಿರುತ್ತವೆ.

1. ಪ್ರತ್ಯೇಕ ಶಾಲೆಗಳಿಗೆ ಶೂ ಮತ್ತು ಸಾಕ್ಸ್‌ಗಳ ಪೂರೈಕೆಯನ್ನು ಪತ್ತೆ ಹಚ್ಚುವುದು ಕಷ್ಟವಾಗಿದ್ದು, ಪೂರೈಕೆಯ ಗುಣಮಟ್ಟದಲ್ಲಿ ಏಕರೂಪತೆಯನ್ನು ಖಚಿತಪಡಿಸಿಕೊಳ್ಳಲಾಗುವುದಿಲ್ಲ.
2. ನಿಗದಿತ ಸಮಯದಲ್ಲಿ ಶೂ ಮತ್ತು ಸಾಕ್ಸ್ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಕಷ್ಟ.
3. ಪಾವತಿ ವಿಳಂಬವಾದರೆ SDMC ಮಟ್ಟದಲ್ಲಿ ಸಣ್ಣ ಕಂಪನಿಗಳು ಪೂರೈಕೆ ಮಾಡಲು ಕಷ್ಟಪಡುತ್ತವೆ.

ಪ್ರತಿ ತರಗತಿಗೆ ನಿರ್ದಿಷ್ಟಪಡಿಸಿದ ಅಳತೆಯ ಶೂ ಮತ್ತು ಸಾಕ್ಸ್‌ಗಳನ್ನು ಪ್ರತಿ ತರಗತಿಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಸರಬರಾಜುದಾರರಿಂದ ಪಡೆಯಲಾಗುವುದು. ಅಳತೆಯಲ್ಲಿ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಶೇ.5 ರಷ್ಟು ಹೆಚ್ಚುವರಿ ದಾಸ್ತಾನನ್ನು ಪ್ರತಿ ತಾಲ್ಲೂಕು ಹಂತದಲ್ಲಿ ಇಟ್ಟುಕೊಂಡು ಸರಿಯಾದ ಶೂ ಮತ್ತು ಸಾಕ್ಸ್‌ಗಳನ್ನು 30 ದಿನಗಳಲ್ಲಿ

ವಿತರಿಸಲಾಗುವುದು ಎಂದು ತಿಳಿಸಿ, 2026-27ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ಖರೀದಿಸಿ ವಿತರಣೆ ಮಾಡುವ ಸಂಬಂಧ ಕೇಂದ್ರೀಕೃತವಾಗಿ ಅಥವಾ ಪ್ರತಿ ವಿಭಾಗಕ್ಕೆ ಪ್ರತ್ಯೇಕವಾಗಿ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ಅದರಡಿ ರೂಪಿಸಲಾದ ನಿಯಮಗಳಂತೆ ಟೆಂಡರ್ ಮೂಲಕ ಶೂ ಮತ್ತು ಸಾಕ್ಸ್‌ಗಳ ವಿತರಣೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಮೇಲೆ ಓದಲಾದ ಕ್ರಮಾಂಕ (2) ರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಏಕಕಡತದಲ್ಲಿ ಕೆಳಕಂಡ ಘಟಕ ವೆಚ್ಚದಂತೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶೂ, ಸಾಕ್ಸ್ ಮತ್ತು ಪಾದರಕ್ಷೆ ವಿತರಣೆಗೆ ಪ್ರಸ್ತಾಪಿಸಲಾಗಿರುತ್ತದೆ.

| ಕ್ರ.ಸಂ | ತರಗತಿಗಳು | ಘಟಕ ವೆಚ್ಚ (ರೂ.ಗಳಲ್ಲಿ) | ವಿದ್ಯಾರ್ಥಿಗಳ ಸಂಖ್ಯೆ | ಒಟ್ಟಾರೆ ಅಗತ್ಯವಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| **ಶೂ ಮತ್ತು ಸಾಕ್ಸ್ ವಿತರಣೆಗೆ ಕೋರಲಾದ ಮೊತ್ತ** | | | | |
| 1 | 1 ರಿಂದ 5 | 265.00 | 1864328 | 4940.47 |
| 2 | 6 ರಿಂದ 8 | 295.00 | 1037622 | 3060.98 |
| 3 | 9 ರಿಂದ 10 | 325.00 | 522037 | 1696.62 |
| **ಒಟ್ಟು** | | | **3423987** | **9698.07** |
| **ಪಾದರಕ್ಷೆ ವಿತರಣೆಗೆ ಕೋರಲಾದ ಮೊತ್ತ (ಉತ್ತರ ಕನ್ನಡ, ಶಿರಸಿ, ಶಿವಮೊಗ್ಗ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ)** | | | | |
| 4 | 1 ರಿಂದ 5 | 265.00 | 125696 | 333.09 |
| 5 | 6 ರಿಂದ 8 | 295.00 | 76095 | 224.48 |
| 6 | 9 ರಿಂದ 10 | 325.00 | 39232 | 127.50 |
| **ಒಟ್ಟು** | | | **241023** | **685.08** |
| **ಒಟ್ಟಾರೆ ಮೊತ್ತ** | | | **3665010** | **10383.15** |

ಪ್ರಸ್ತಾವನೆಯಲ್ಲಿ ಶೂ ಗಳ ತಾಂತ್ರಿಕ ನಿರ್ದಿಷ್ಟತೆಗಳನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

| Sl.No. | Item | Specification |
|---|---|---|
| 1 | Upper Material | PVC coated on PC/PV fabric (Woven or non woven)<br>1.8mm ±0.2mm thickness& backing textile 200 GSM<br>Colour Black |
| 2 | In sock | Fabric laminated with EVA Foam<br>EVA Foam 2.5mm ±0.5mm and density 0.25g/cc min<br>Fabric Thickness: 0.8mm+ ±0.2mm (SATRA TM 27:2018) |

ಮೇಲ್ಕಂಡ ಪ್ರಸ್ತಾವನೆಯ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 112 ಎಂಪಿಇ 2025,**
**ಬೆಂಗಳೂರು, ದಿನಾಂಕ: 16 ನೇ ಮಾರ್ಚ್ 2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿದ್ಯಾವಿಕಾಸ ಯೋಜನೆಯ **ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿ** 2026-27ನೇ **ಶೈಕ್ಷಣಿಕ** ಸಾಲಿನಲ್ಲಿ ವಿದ್ಯಾವಿಕಾಸ **ಯೋಜನೆಯಡಿ** ರಾಜ್ಯದಲ್ಲಿನ **ಸರ್ಕಾರಿ ಶಾಲೆಗಳಲ್ಲಿ** 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ **ಮಾಡುತ್ತಿರುವ ಅಂದಾಜು 36.56 ಲಕ್ಷ** ವಿದ್ಯಾರ್ಥಿಗಳಿಗೆ **ಉತ್ತಮ** ಗುಣಮಟ್ಟದ ಒಂದು **ಜೊತೆ ಶೂ** ಮತ್ತು ಎರಡು **ಜೊತೆ ಸಾಕ್ಸ್‌ಗಳನ್ನು** ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ಅದರಡಿ **ರೂಪಿಸಲಾದ** ನಿಯಮಗಳನ್ವಯ ಪಾರದರ್ಶಕ **ಟೆಂಡರ್** ಮೂಲಕ ಅಂದಾಜು ವೆಚ್ಚ **ರೂ.104.00 ಕೋಟಿಗಳಲ್ಲಿ** (ಒಂದು ನೂರ ನಾಲ್ಕು ಕೋಟಿ ರೂಪಾಯಿಗಳು ಮಾತ್ರ) **ರಾಜ್ಯಮಟ್ಟದಲ್ಲಿ ಖರೀದಿಸಿ** ವಿತರಣೆ ಮಾಡಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ **ಈ ಕೆಳಕಂಡ** ಷರತ್ತು ಮತ್ತು ನಿಬಂಧನೆಗಳ ಪಾಲನೆಗೆ ಒಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

| **ಕಾರ್ಯಕ್ರಮ/ಲೆಕ್ಕಶೀರ್ಷಿಕೆ** | **ಉಪಲೆಕ್ಕಶೀರ್ಷಿಕೆಗಳು** | **ಅಂದಾಜು ಅನುದಾನ (ರೂ.ಕೋಟಿಗಳಲ್ಲಿ)** |
|---|---|---|
| ವಿದ್ಯಾವಿಕಾಸ ಯೋಜನೆ<br>2202-01-109-0-03 | 221- Materials and Supplies<br>133- Aspirational Taluks<br>422- Schedule caste sub plan<br>423- tribal sub plan | ರೂ.104.00 ಕೋಟಿ<br>(ಒಂದು ನೂರ ನಾಲ್ಕು ಕೋಟಿ ರೂಪಾಯಿಗಳು ಮಾತ್ರ) |

**ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕಾರ್ಯಕ್ರಮದ ಅನುಷ್ಠಾನದಲ್ಲಿ ಅನುಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು:**

1. ಸದರಿ ಕಾರ್ಯಕ್ರಮವನ್ನು ಒದಗಿಸಲಾದ ಅನುದಾನದ ಮಿತಿಯೊಳಗೆ ಅನುಷ್ಠಾನಗೊಳಿಸತಕ್ಕದ್ದು. ಸರ್ಕಾರದ ಅನುಮತಿ ಇಲ್ಲದೇ ಕಾರ್ಯಕ್ರಮದ **ಮಿತಿಯನ್ನು ಹೆಚ್ಚಳ ಮಾಡತಕ್ಕದ್ದಲ್ಲ.**
2. **ಉತ್ತಮ ಗುಣಮಟ್ಟದ** ಒಂದು **ಜೊತೆ ಕಪ್ಪು** ಬಣ್ಣದ ಶೂ ಹಾಗೂ ಎರಡು ಜೊತೆ ಬಿಳಿ ಬಣ್ಣದ ಸಾಕ್ಸ್‌ಗಳನ್ನು ಯಾವುದೇ **ಹೆಚ್ಚುವರಿ** ಅನುದಾನ ಕೋರದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999, ಅದರಡಿ ಹೊರಡಿಸಲಾದ ನಿಯಮಗಳು ಮತ್ತು ಕಾಲ ಕಾಲಕ್ಕೆ ಹೊರಡಿಸಲಾಗಿರುವ ಸರ್ಕಾರದ **ಮಾರ್ಗಸೂಚಿಗಳಂತೆ** ಚಾಚೂ ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸಿ **ಪಾರದರ್ಶಕ ಟೆಂಡರ್ ಮೂಲಕ** ಅನುಷ್ಠಾನಗೊಳಿಸತಕ್ಕದ್ದು. ಯಾವುದೇ ಕಾರಣಕ್ಕೂ **ಒದಗಿಸಲಾದ ಅನುದಾನ ವ್ಯಪಗತವಾಗದಂತೆ** ಕ್ರಮವಹಿಸತಕ್ಕದ್ದು.
3. ಈ ಹಿಂದಿನ ಸಾಲುಗಳಲ್ಲಿ ನೀಡಿರುವ **ಈ ಕೆಳಕಂಡ ತಾಂತ್ರಿಕ ನಿರ್ದಿಷ್ಟತೆಗಳಿಗಿಂತ ಉತ್ತಮ ತಾಂತ್ರಿಕ ನಿರ್ದಿಷ್ಟತೆಗಳು** ಮತ್ತು **ಉತ್ತಮ ಗುಣಮಟ್ಟ** ಹೊಂದಿರುವ ಶೂ ಮತ್ತು ಸಾಕ್ಸ್‌ಗಳನ್ನು ಖರೀದಿಸತಕ್ಕದ್ದು ಮತ್ತು ರಾಜ್ಯದ ಎಲ್ಲಾ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಒಟ್ಟಾಗಿ ಕೇಂದ್ರೀಕೃತ ಖರೀದಿ ಪ್ರಕ್ರಿಯೆ ನಡೆಸುತ್ತಿರುವುದರಿಂದ economies of scale ದೊರಕುವುದರಿಂದ ಉತ್ತಮ ಗುಣಮಟ್ಟದ ಶೂ, ಸಾಕ್ಸ್ ಮತ್ತು

ಪಾದರಕ್ಷೆಗಳನ್ನು (Velcro Sandals) ಸ್ಪರ್ಧಾತ್ಮಕ ದರದಲ್ಲಿ (competitive rates) ಖರೀದಿಸಲು ಕ್ರಮವಹಿಸತಕ್ಕದ್ದು.

| ಅಂಶ | ಕನಿಷ್ಠ ತಾಂತ್ರಿಕ ನಿರ್ದಿಷ್ಟತೆ |
|---|---|
| ಶೂಗಳ ಮೇಲ್ಪದರು | ಪಾಲಿವಿನ್ಯಲ್ ಪಿ.ವಿ.ಸಿ ಕೋಟೆಡ್ ವಿಸ್ಕೋಸ್/ಪಾಲಿಯೆಸ್ಟರ್/ ಪಾಲಿಯೆಸ್ಟರ್ ಕಾಟನ್ ಫ್ಯಾಬ್ರಿಕ್ 1.5 ಎಂಎಂ ಹೊಂದಿದ ಮತ್ತು ಎಕ್ಸ್ಪಂಡೆಡ್ ಪಾಲಿವಿನ್ಯಲ್ ಕ್ಲೋರೈಡ್ (ಪಿ.ವಿ.ಸಿ) ಸೋಲ್ |
| ಪಾದರಕ್ಷೆಯ ಒಳಪದರು(Insock) | ಬಟ್ಟೆ/ಫ್ಯಾಬ್ರಿಕ್‌ನಿಂದ ಕೂಡಿರುವುದನ್ನು (ಅಂದಾಜು 0.8 ಎಂ.ಎಂ ದಪ್ಪ) |

4. 2026-27ನೇ ಸಾಲಿನಲ್ಲಿ ಈ ಕೆಳಕಂಡ ಗರಿಷ್ಠ ಘಟಕ ವೆಚ್ಚದಲ್ಲಿ ಒಂದು ಜೊತೆ ಶೂ ಮತ್ತು 2 ಜೊತೆ ಸಾಕ್ಸ್ ಗಳನ್ನು ಕೆ.ಟಿ.ಪಿ.ಪಿ, ಕಾಯ್ದೆ ಮತ್ತು ನಿಯಮಗಳಂತೆ ಖರೀದಿಸಿ ಸರಬರಾಜು ಮಾಡಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಕ್ರಮವಹಿಸತಕ್ಕದ್ದು.

| ತರಗತಿ | ಗರಿಷ್ಠ ಘಟಕ ವೆಚ್ಚ (ರೂ.ಗಳಲ್ಲಿ) |
|---|---|
| 1 ರಿಂದ 5 ನೇ ತರಗತಿ ವಿದ್ಯಾರ್ಥಿಗಳಿಗೆ | 265.00 |
| 6 ರಿಂದ 8 ನೇ ತರಗತಿ ವಿದ್ಯಾರ್ಥಿಗಳಿಗೆ | 295.00 |
| 9 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ | 325.00 |

5. ಅಧಿಕ ಮಳೆಯಾಗುವ ಪ್ರದೇಶಗಳ ಶಾಲೆಗಳ ಎಸ್.ಡಿ.ಎಂ.ಸಿ.ಗಳು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಶೂಗಳ ಬದಲು ಪಾದರಕ್ಷೆಗಳು (ಸ್ಯಾಂಡಲ್‌ಗಳು) ಸರಬರಾಜು ಮಾಡಲು ಕೋರಿದಲ್ಲಿ ಮಾತ್ರ ಅಂತಹ ಶಾಲೆಗಳ ವಿದ್ಯಾರ್ಥಿಗಳಿಗೆ ಶೂಗಳ ಬದಲು ಉತ್ತಮ ಗುಣಮಟ್ಟದ ವೆಲ್ ಕ್ರೋ ಪಾದರಕ್ಷೆಗಳನ್ನು (Velcro Sandals) ಸರಬರಾಜು ಮಾಡಲು ಕ್ರಮವಹಿಸತಕ್ಕದ್ದು. ಕಳೆದ ಶೈಕ್ಷಣಿಕ ಸಾಲಿನಲ್ಲಿ ವೆಲ್ ಕ್ರೋ ಪಾದರಕ್ಷೆಗಳನ್ನು ಖರೀದಿಸಲು ಅನುಮತಿ ಪಡೆದ ಜಿಲ್ಲೆಗಳ ಶಾಲೆಗಳನ್ನು ಹೊರತು ಪಡಿಸಿ ಇತರೆ ಯಾವುದೇ ಜಿಲ್ಲೆಗಳ ಶಾಲೆಗಳನ್ನು ಹೊಸದಾಗಿ ಸೇರಿಸತಕ್ಕದ್ದಲ್ಲ.
6. ಶಾಲಾ ಸಮವಸ್ತ್ರ, ಖರೀದಿ ಮತ್ತು ಸರಬರಾಜಿನ ಪ್ರಕ್ರಿಯೆಯಲ್ಲಿ ರಚಿಸಲಾದ ಸಮಿತಿಗಳಂತೆಯೇ ಶೂ, ಸಾಕ್ಸ್ ಮತ್ತು ಪಾದರಕ್ಷೆಗಳ ಖರೀದಿ ಹಾಗೂ ಪೂರೈಕೆ ಪ್ರಕ್ರಿಯೆಗೂ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು ನಿಯಮಾನುಸಾರ ವಿಷಯ ತಜ್ಞರನ್ನು ಹೊಂದಿರುವ ಸಮಿತಿಗಳನ್ನು (Expert Committee) ರಚಿಸತಕ್ಕದ್ದು. ಖರೀದಿಸಲಾದ ಶೂ-ಸಾಕ್ಸ್ ಮತ್ತು ಪಾದರಕ್ಷೆಗಳ ಮಾದರಿಗಳನ್ನು ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಗಳ ಮೂಲಕ ಗುಣಮಟ್ಟ ಪರೀಕ್ಷೆಗೆ ಒಳಪಡಿಸತಕ್ಕದ್ದು.
7. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ರಚಿಸುವ ವಿಷಯ ತಜ್ಞ ತಾಂತ್ರಿಕ ಸಮಿತಿಯು (Expert Committee) ನಿಗದಿಪಡಿಸುವ ಶೂ, ಸಾಕ್ಸ್ ಮತ್ತು ಪಾದರಕ್ಷೆಗಳ (Velcro Sandals) ತಾಂತ್ರಿಕ ನಿರ್ದಿಷ್ಟತೆಯು ಹಿಂದಿನ ಶೈಕ್ಷಣಿಕ ಸಾಲುಗಳಲ್ಲಿ ಅನುಮೋದನೆ ನೀಡಿರುವ ಗುಣಮಟ್ಟಕ್ಕಿಂತ ಉತ್ತಮ ಗುಣಮಟ್ಟದಾಗಿರಬೇಕು ಹಾಗೂ ತಾಂತ್ರಿಕ ನಿರ್ದಿಷ್ಟತೆಗಳು ಮಾರಾಟಗಾರ

ತಟಸ್ಥವಾಗಿರತಕ್ಕದ್ದು(Vendor Neutral). ತಾಂತ್ರಿಕ ಸಮಿತಿಯು ಶೂ, ಸಾಕ್ಸ್ ಮತ್ತು ಪಾದರಕ್ಷೆಗಳ (Velcro Sandals) ತಾಂತ್ರಿಕ ನಿರ್ದಿಷ್ಟತೆಗಳನ್ನು ನಿಗದಿಪಡಿಸುವಾಗ Bureau of Indian Standards ನವರು ನಿಗದಿಪಡಿಸಿರುವ ತಾಂತ್ರಿಕ ನಿರ್ದಿಷ್ಟತೆಗಳನ್ನು ಅಳವಡಿಸಿಕೊಂಡು ಹೆಚ್ಚು ಸಂಖ್ಯೆಯ ತಯಾರಕರು ಪಾರದರ್ಶಕ ಟೆಂಡರ್‌ನಲ್ಲಿ ನಿಯಮಾನುಸಾರ ಭಾಗವಹಿಸುವಂತೆ ಕ್ರಮವಹಿಸತಕ್ಕದ್ದು.

8. ಜಿಲ್ಲೆ, ತಾಲ್ಲೂಕು ಮತ್ತು ಶಾಲಾ ಮಟ್ಟದಲ್ಲಿಯೂ ಸಮಿತಿಗಳನ್ನು ರಚಿಸಿ ಉತ್ತಮ ಗುಣಮಟ್ಟದ ಶೂ-ಸಾಕ್ಸ್ ಗಳು ಮತ್ತು ಪಾದರಕ್ಷೆಗಳು (Velcro Saandals) ಸಕಾಲದಲ್ಲಿ ಶಾಲೆಗಳಿಗೆ ಸರಬರಾಜಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು ಕ್ರಮವಹಿಸತಕ್ಕದ್ದು.
9. ವಿಷಯ ತಜ್ಞ ತಾಂತ್ರಿಕ ಸಮಿತಿಯ (Expert Committee) ಶಿಫಾರಸ್ಸಿನಂತೆ ನಿಗದಿಪಡಿಸಿದ ಶೂ, ಸಾಕ್ಸ್ ತಾಂತ್ರಿಕ ವೈಶಿಷ್ಟ್ಯತೆಯ ವಿಸ್ತ್ರತವಾದ ವಿವರಗಳನ್ನು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮವಹಿಸುವುದು. ಹಿಂದಿನ ಸಾಲುಗಳಲ್ಲಿ ಕಳಪೆ ಗುಣಮಟ್ಟದ ಮತ್ತು ನಕಲಿ ಬ್ರ್ಯಾಂಡೆಡ್ ಶೂ ಮತ್ತು ಸಾಕ್ಸ್ ಸರಬರಾಜಾಗಿರುವ ಬಗ್ಗೆ ಸರ್ಕಾರದ ಹಂತದಲ್ಲಿ ಸಾಕಷ್ಟು ದೂರುಗಳು ಸ್ವೀಕೃತವಾಗಿರುತ್ತವೆ. ಆದ್ದರಿಂದ, ಪ್ರಸ್ತುತ ಸಾಲಿನಲ್ಲಿ ಜಾಗರೂಕತೆಯಿಂದ ಪರಿಶೀಲಿಸಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ಮೂಲಕ ಪಾರದರ್ಶಕ ಟೆಂಡರ್ ಕರೆದು ಉತ್ತಮ ಗುಣಮಟ್ಟದ ಶೂ - ಸಾಕ್ಸ್ ಮತ್ತು ಪಾದರಕ್ಷೆ (Velcro Saandals) ಗಳನ್ನು ಖರೀದಿಸಲು ಕ್ರಮವಹಿಸತಕ್ಕದ್ದು. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು ಶೂ - ಸಾಕ್ಸ್ ಮತ್ತು ಪಾದರಕ್ಷೆ (Velcro Saandals) ಗಳ ಗುಣಮಟ್ಟದಲ್ಲಿ ಯಾವುದೇ ರಾಜಿಯಾಗದಂತೆ ಎಚ್ಚರ ವಹಿಸತಕ್ಕದ್ದು.
10. 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ವಿದ್ಯಾರ್ಥಿಗಳಿಗೆ ಶೂ - ಸಾಕ್ಸ್ ಮತ್ತು ಪಾದರಕ್ಷೆ (Velcro Saandals) ಗಳನ್ನು ವಿತರಿಸಲು ಕ್ರಮವಹಿಸತಕ್ಕದ್ದು.
11. ಬಿಡುಗಡೆ ಮಾಡಲಾದ ಅನುದಾನದ ಬಳಕೆಯ ಬಗ್ಗೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿಯಮಾನುಸಾರ ಲೆಕ್ಕಪತ್ರಗಳನ್ನು ಇಡತಕ್ಕದ್ದು ಹಾಗೂ ಸಂಬಂಧಿತವಾಗಿ ಅನುದಾನ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
12. ಒದಗಿಸಲಾದ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಒದಗಿಸಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು. ಇತರೇ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.
13. ಈ ಹಿಂದಿನ ಶೈಕ್ಷಣಿಕ ಸಾಲುಗಳಲ್ಲಿ ಶಾಲೆಗಳಿಗೆ ಬಿಡುಗಡೆ ಮಾಡಿ ಉಳಿಕೆಯಾದ ಅನುದಾನವನ್ನು ಹಿಂಪಡೆಯಲು ಕ್ರಮವಹಿಸತಕ್ಕದ್ದು. ಈ ರೀತಿ ಹಿಂಪಡೆದ ಅನುದಾನದ ಮಾಹಿತಿಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.
14. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು SATS ಮೂಲಕ ಶಾಲೆಗಳಿಂದ ತರಗತಿವಾರು, ಗಂಡು ಮತ್ತು ಹೆಣ್ಣು ಮಕ್ಕಳ ಶೂ ಮತ್ತು ಸಾಕ್ಸ್‌ಗಳಿಗೆ ಅಳತೆ ಸಹಿತ ಬೇಡಿಕೆ ಪಡೆಯಲು ಈ ಸರ್ಕಾರದ ಆದೇಶದಂತೆ ಎಲ್ಲಾ ಶಾಲೆಗಳ ವಿಧವನ್ನು SATS ನಲ್ಲಿ ಇಂದೀಕರಿಸಲು ಕ್ರಮವಹಿಸತಕ್ಕದ್ದು.
15. ಶೂ-ಸಾಕ್ಸ್‌ಗಳ ಅಳತೆ(Size) ಗೆ ಸಂಬಂಧಿಸಿದಂತೆ ಶಾಲಾವಾರು/ವಿದ್ಯಾರ್ಥಿಗಳವಾರು ಅಗತ್ಯ ಕಂಡುಬಂದಲ್ಲಿ ಅಳತೆಯನ್ನು(Size) ಬದಲಾವಣೆ ಮಾಡಿ ಎಸ್.ಡಿ.ಎಂ.ಸಿ.ಯ ಬೇಡಿಕೆಯನುಸಾರ ಪೂರೈಸುವ ಷರತ್ತನ್ನು ಟೆಂಡರ್‌ನಲ್ಲಿ ಅಳವಡಿಸತಕ್ಕದ್ದು.
16. ಟೆಂಡರ್ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ನ್ಯಾಯಸಮ್ಮತತೆಯನ್ನು ಹಾಗೂ ಟೆಂಡರ್ ಮೂಲಕ ಆಯ್ಕೆಯಾದ ಸರಬರಾಜುದಾರರಿಂದ ಪೂರೈಕೆ ಮಾಡಲಾಗುವ ಶೂ - ಸಾಕ್ಸ್ ಮತ್ತು ಪಾದರಕ್ಷೆ (Velcro Saandals) ಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ

ಇವರದ್ದಾಗಿರುತ್ತದೆ. ಶೂ ಮತ್ತು ಸಾಕ್ಸ್‌ಗಳು ವಿದ್ಯಾರ್ಥಿಗಳಿಗೆ ಸರಿಯಾದ ಅಳತೆಯಲ್ಲಿ ಹಾಗೂ ಶೈಕ್ಷಣಿಕ ವರ್ಷದ ಪ್ರಾರಂಭದೊಳಗೆ ಶಾಲೆಗಳಿಗೆ ಪೂರೈಕೆ ಆಗುವಂತೆ ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರದ್ದಾಗಿರುತ್ತದೆ.

17. ಶೂ ಮತ್ತು ಸಾಕ್ಸ್‌ಗಳಿಗೆ ನೈಜ ದಾಖಲಾತಿಯಂತೆ ದೃಢೀಕರಿಸಿ SATS ಮೂಲಕ ಬೇಡಿಕೆಯನ್ನು ಪಡೆದು ಖರೀದಿ ಮತ್ತು ಸರಬರಾಜಿಗೆ ಕ್ರಮವಹಿಸತಕ್ಕದ್ದು. ವಿನಾಕಾರಣ ಹೆಚ್ಚುವರಿ ಬೇಡಿಕೆ ಸಲ್ಲಿಸಿ, ಸರ್ಕಾರದ ಹಣ ದುರುಪಯೋಗವಾಗಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಶಾಲಾ/ಕಾಲೇಜುಗಳ ಮುಖ್ಯಸ್ಥರು/ಪ್ರಾಂಶುಪಾಲರು, ನೋಡಲ್ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು (ಆಡಳಿತ) ಇವರುಗಳನ್ನೇ ಸಂಪೂರ್ಣ ಹೊಣೆಗಾರರನ್ನಾಗಿಸಲಾಗುವುದು.

18. ಈ ಸರ್ಕಾರದ ಆದೇಶ, ಈ ಸಂಬಂಧ ಹೊರಡಿಸಲಾಗುವ ಎಲ್ಲಾ ಆದೇಶಗಳು, ಸುತ್ತೋಲೆಗಳನ್ನು, ನಿಗದಿಪಡಿಸಿದ ತಾಂತ್ರಿಕ ನಿರ್ದಿಷ್ಟತೆಗಳು ಹಾಗೂ SATS ಮೂಲಕ ಪಡೆದ ಬೇಡಿಕೆಯ ವಿವರಗಳನ್ನು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು ತಮ್ಮ ಇಲಾಖಾ ಜಾಲತಾಣದಲ್ಲಿ ಅಳವಡಿಸತಕ್ಕದ್ದು.

19. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ನಿಗದಿಪಡಿಸತಕ್ಕದ್ದು ಹಾಗೂ ಅದರನ್ವಯ ಭರಿಸಲಾಗುವ ವೆಚ್ಚದ ವಿವರಗಳನ್ನು ಪ್ರತಿ ಮಾಹೆ ಹೊಸ ಡಿಜಿಟಲ್ ಸಪೋರ್ಟ್ ಸಿಸ್ಟಂ (ಅವಲೋಕನ) ತಂತ್ರಾಂಶದಲ್ಲಿ ಇಂದೀಕರಿಸತಕ್ಕದ್ದು. ಸದರಿ ಕಾರ್ಯಕ್ರಮದ ಪ್ರಗತಿಯ ವರದಿಯನ್ನು ತ್ರೈಮಾಸಿಕವಾರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 44 ವೆಚ್ಚ-8/2026, ಆರ್ಥಿಕ ಇಲಾಖೆ(ವೆಚ್ಚ-8), ದಿನಾಂಕ:27.01.2026 ರಂತೆ ನೀಡಿರುವ ಸಹಮತಿ ಮೇರೆಗೆ ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 04 ಟಿ.ಎಫ್.ಪಿ 2025, ದಿನಾಂಕ:01.01.2026 ರಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

16/3/26

(ಶುಭಮಂಗಳ ಆರ್ ವಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ),
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, (ಆಡಿಟ್ 1 & 2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
5. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.

6. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು(ಟಿಪ್ಪಣಿ ಸಂ.ಸಿ:113/2026, ದಿನಾಂಕ:12.02.2026).
7. ಸರ್ಕಾರದ ಜಂಟಿ ಕಾರ್ಯದರ್ಶಿ-2 ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು.
9. ಸಂಯೋಜಕರು, ಇ-ಆಡಳಿತ ಘಟಕ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ- ವೆಬ್‌ಸೈಟ್ ಪ್ರಕಟಣೆಗಾಗಿ.
10. ಸಾಪ್ತಾಹಿಕ ರಾಜ್ಯ ಪತ್ರ / ಶಾಲಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ. ಸೌಧ, ಬೆಂಗಳೂರು.
2. 2.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ) ರವರ ಆಪ್ತ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು.